4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 388/2022

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ಉಪ ನಿರೀಕ್ಷಕರು,
ಕೆ ಆರ್ ನಗರ ಪೊಲೀಸ್ ಠಾಣೆ,
ಮೈಸೂರು ಜಿಲ್ಲೆ .

**ವಿರುದ್ಧ**

ಆರೋಪಿತರು : ಶ್ರೀ ಸತೀಶ ಮತ್ತು ಮತ್ತೊಬ್ಬರು

## ದೋಷಾರೋಪಣೆ

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ

ಕೆಳಕಂಡ ಆರೋಪಿತರಾದಃ-

1 ಶ್ರೀ ಸತೀಶ, ಬಿನ್ ನಾಗೇಗೌಡ
42 ವರ್ಷ, ವಾಸಃ ಬಸವಪಟ್ಟಣ ಗ್ರಾಮ,
ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ.

2. ಶ್ರೀ ನಾಗೇಗೌಡ, ಬಿನ್ ಲೇಟ್ ಕರಕಲೇಗೌಡ,
67 ವರ್ಷ, ವಾಸಃ ಬಸವಪಟ್ಟಣ ಗ್ರಾಮ,
ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 15.05.2019 ರಂದು ಸಂಜೆ 4.30 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೊಲೀಸ್ ಠಾಣಾ ಸರಹದ್ದು, ಬಸವಪಟ್ಟಣ ಎಲ್ಲೆಗೆ ಸೇರಿದ ಸಾಕ್ಷಿ-3 ರವರ ಸರ್ವೆ ನಂ.87/9 ರ

ಜಮೀನಿನಲ್ಲಿ ಸಾಕ್ಷಿ–1 ಮತ್ತು 2 ರವರು ಕೆಲಸ ಮಾಡುತ್ತಿದ್ದಾಗ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಾಕ್ಷಿ–1 ಮತ್ತು 2 ರವರು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಬಂದು ಸಾಕ್ಷಿ–1 ರವರಿಗೆ ಕೆಲಸ ನಿಲ್ಲಿಸು ನಿಮ್ ಅವ್ವನ ಕೆಯ್ಯು, ಬೋಳಿ ಮಗನೆ, ಸೂಳೀ ಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೇಯದಾಗ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಸಾಕ್ಷಿ–1 ರವರಿಗೆ ನಿನ್ನನ್ನು ಇಷ್ಟು ದಿನ ಬಿಟ್ಟಿದ್ದೆ ತಪ್ಪಾಯ್ತು, ಇವತ್ತು ನಿನ್ನನ್ನು ಕೊಲೆ ಮಾಡಿ ಹೂತು ಹಾಕಿ ಬಿಡುತ್ತೇನೆ, ನಿನ್ನನ್ನು ಕೊಲೆ ಮಾಡಿದರೆ ಸರಿಯಾಗುತ್ತದೆ, ನೀನು ಬದುಕಿದ್ದರೆ ತಾನೆ ಎಂದು ಕೊಲೆ ಬೆದರಿಕೆ ಹಾಕಿ ಭಯೋತ್ಪಾದನೆಯನ್ನುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ 1 ನೇ ಆರೋಪಿಯಾದ ನೀವು ಅಲ್ಲಿಯೇ ಬಿದ್ದಿದ್ದ ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಸಾಕ್ಷಿ–1 ರವರ ಹಣೆಯ ಬಲಭಾಗಕ್ಕೆ ಹೊಡೆದಿದ್ದು, 2 ನೇ ಆರೋಪಿಯಾದ ನೀವು ಕೊಲೆ ಮಾಡುವ ಉದ್ದೇಶದಿಂದ ಇನ್ನೊಂದು ರಾಡಿನಿಂದ ಸಾಕ್ಷಿ–1 ರವರ ಎಡಕೈಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 307 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಸಾಕ್ಷಿ–2 ರವರು ಜಗಳ ಬಿಡಿಸಲು ಹೋದಾಗ 1 ನೇ ಆರೋಪಿಯಾದ ನೀವು ಸಾಕ್ಷಿ–2 ರವರ ಸೀರೆಯನ್ನು ಹಿಡಿದು ಎಳೆದಾಡಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಜಗಳ ಬಿಡಿಸಲು ಬಂದ ಸಾಕ್ಷಿ–3 ರವರನ್ನು 1 ನೇ ಆರೋಪಿಯಾದ ನೀವು ಜಾಡಿಸಿ ನೂಕಿ ಕೆಳಕ್ಕೆ ಬೀಳಿಸಿದ ಪರಿಣಾಮ ಸಾಕ್ಷಿ–3 ರವರ ಹೊಟ್ಟೆ ಮತ್ತು ಎಡ ಮಂಡಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ

ಈ ಮೇಲ್ಕಂಡ ಆರೋಪದಡಿ ಆರೋಪಿಗಳಾದ ನೀವು ನನ್ನಿಂದ ಈ ದಿನ ದಿನಾಂಕ 24.07.2024 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 388/2022

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ಉಪ ನಿರೀಕ್ಷಕರು,
ಕೆ ಆರ್ ನಗರ ಪೊಲೀಸ್ ಠಾಣೆ,
ಮೈಸೂರು ಜಿಲ್ಲೆ .

**ವಿರುದ್ಧ**

**ಆರೋಪಿ–1** ಶ್ರೀ ಸತೀಶ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 24.07.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
**4** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 388/2022

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ಉಪ ನಿರೀಕ್ಷಕರು,
ಕೆ ಆರ್ ನಗರ ಪೊಲೀಸ್ ಠಾಣೆ,
ಮೈಸೂರು ಜಿಲ್ಲೆ .

**ವಿರುದ್ಧ**

**ಆರೋಪಿ–2** ಶ್ರೀ ನಾಗೇಗೌಡ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 24.07.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.